ಕಛೇರಿ : 080-2287 4039
080-2235 4085
ಫ್ಯಾಕ್ಸ್ : 080-2228 5591

# ಆಯುಕ್ತಾಲಯ

## ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ಆಯುಷ್ ಸೇವೆಗಳು

ಸಂಖ್ಯೆ: ಎನ್‌ಹೆಚ್‌ಎಂ/ಎನ್‌ಯುಹೆಚ್‌ಎಂ/ಕೋವಿಡ್-19/28/2020 ದಿ.22/06/2020

<u>ಸುತ್ತೋಲೆ</u>

ವಿಷಯ: ಕೋವಿಡ್-19 ರ ಪ್ರಕರಣಗಳ ತಪಾಸಣೆಗೆ "ಜ್ವರ ಚಿಕಿತ್ಸಾಲಯ"ಗಳನ್ನು ಸ್ಥಾಪಿಸುವ ಬಗ್ಗೆ...

*****

ವಿಶ್ವ ಆರೋಗ್ಯ ಸಂಸ್ಥೆಯು ಕೋವಿಡ್-19 ನ್ನು ಸರ್ವವ್ಯಾಪಿ ಸಾಂಕ್ರಾಮಿಕ ರೋಗವೆಂದು ಘೋಷಣೆ ಮಾಡಿದ್ದು, ಈ ರೋಗದ ಪ್ರಸರಣವನ್ನು ತಡೆಗಟ್ಟುವ ನಿಟ್ಟಿನಲ್ಲಿ ಭಾರತ ಗಣರಾಜ್ಯವು 1.0 ರಿಂದ 4.0 ಹಂತಗಳಲ್ಲಿ ಲಾಕ್‌ಡೌನ್ ಕ್ರಮಗಳು ಸೇರಿದಂತೆ ಹಲವು ಮುನ್ನೆಚ್ಚರಿಕಾ ಕ್ರಮಗಳನ್ನು ತೆಗೆದುಕೊಂಡಿದೆ. ಮುಂದುವರೆದು ಈ ರೋಗ ನಿಯಂತ್ರಣದಲ್ಲಿ ಕರ್ನಾಟಕ ರಾಜ್ಯವೂ ಸಮರೋಪಾದಿಯಲ್ಲಿ ಕಾರ್ಯನಿರತವಾಗಿದೆ.

ಲಾಕ್ ಡೌನ್ ಪ್ರಕ್ರಿಯೆಯನ್ನು ಹಂತಹಂತವಾಗಿ ಹಿಂತೆಗೆಯುತ್ತಾ ಬಂದಿದ್ದು, ವಿವಿಧ ಮಾದರಿಯ ಸಾರಿಗೆ ವ್ಯವಸ್ಥೆಯನ್ನು ಅಂತರ ಜಿಲ್ಲಾ, ಅಂತರರಾಜ್ಯ ಮತ್ತು ಅಂತರರಾಷ್ಟ್ರೀಯ ವ್ಯಾಪ್ತಿಯಲ್ಲಿ ಮುಕ್ತಗೊಳಿಸಿದೆ. ಈ ಹಿನ್ನೆಲೆಯಲ್ಲಿ ಪರಿಣಾಮಕಾರಿ ಆರೋಗ್ಯ ತಪಾಸಣೆ ಮತ್ತು ಕ್ವಾರಂಟೈನ್ ವ್ಯವಸ್ಥೆಯನ್ನು ವಿಕೇಂದ್ರಿಕೃತ ಸ್ವರೂಪದಲ್ಲಿ ಇನ್ನಿತರ ಸಿಬ್ಬಂದಿಗಳ ಪಾಲ್ಗೊಳ್ಳುವಿಕೆ ಮತ್ತು ಆಡಳಿತ್ಮಾತಕ ಕ್ರಮಗಳೊಂದಿಗೆ ಕೋವಿಡ್-19 ರ ನಿಯಂತ್ರಣವನ್ನು ಖಾತ್ರಿಪಡಿಸಬೇಕಾಗಿದೆ.

ಈ ನಿಟ್ಟಿನಲ್ಲಿ ಶೀತ ಸಂಬಂಧಿ ಖಾಯಿಲೆಗಳು (ಐಎಲ್‌ಐ) ಮತ್ತು ತೀವ್ರತೆರನಾದ ಉಸಿರಾಟ ಸೋಂಕುಗಳ(ಎಸ್‌ಎಆರ್‌ಐ) ತಪಾಸಣೆ ಮತ್ತು ಶಿಫಾರಸ್ಸು ಮಾಡಲು ಹಾಗೂ ಗಂಟಲು ಮಾದರಿ ದ್ರವ ಸಂಗ್ರಹಣೆಗೆ ಜ್ವರ ಚಿಕಿತ್ಸಾಲಯಗಳ ಸಂಖ್ಯೆಯನ್ನು ಹೆಚ್ಚಿಸುವ ಅಗತ್ಯವಿದೆ.

"ಜ್ವರ ಚಿಕಿತ್ಸಾಲಯ"ಗಳನ್ನು ಎಲ್ಲಾ ಜಿಲ್ಲಾ ಆಸ್ಪತ್ರೆಗಳು/ಜಿಲ್ಲಾ ಮಟ್ಟದ ಆಸ್ಪತ್ರೆಗಳು ಮತ್ತು ತಾಲ್ಲೂಕು ಮಟ್ಟದ ಆಸ್ಪತ್ರೆಗಳಲ್ಲಿ ಸ್ಥಾಪಿಸಬೇಕಾಗಿದ್ದು, ಎಲ್ಲಾ ಜ್ವರ ಪ್ರಕರಣಗಳನ್ನು 24*7 ಅವಧಿಯಲ್ಲಿ ಪ್ರತ್ಯೇಕವಾಗಿ ಕಾಯ್ದಿರಿಸಿದ ಸ್ಥಳದಲ್ಲಿ ತಪಾಸಣೆ ಮಾಡಬೇಕು. ಐಎಲ್‌ಐ ಮತ್ತು ಎಸ್‌ಎಆರ್‌ಐಗಳಿಂದ ಭಾದಿತರಾಗಿರುವ ವ್ಯಕ್ತಿಗಳ ಗಂಟಲು ಮಾದರಿ ದ್ರವವನ್ನು ಕೂಡ ಸಂಗ್ರಹಣೆ ಮಾಡಬೇಕಾಗುತ್ತದೆ. ಮಹಾನಗರ ಮತ್ತು ನಗರಪಾಲಿಕೆಗಳ ವ್ಯಾಪ್ತಿಯಲ್ಲಿ ಖಾಸಗಿ ಆರೋಗ್ಯ ಸಂಸ್ಥೆಗಳನ್ನು ಕೂಡ ಜ್ವರ ಚಿಕಿತ್ಸಾಲಯಗಳಾಗಿ ಗುರುತಿಸಬಹುದು.



3ನೇ ಮಹಡಿ, ಐಪಿಪಿ ಬಿಲ್ಡಿಂಗ್, ಆನಂದ್ ರಾವ್ ಸರ್ಕಲ್, ಬೆಂಗಳೂರು – 560 009.

ದೈನಂದಿನ ಕೆಲಸದ ಅವಧಿಯಲ್ಲಿ ಐಎಲ್ಐ ಮತ್ತು ಎಸ್ಎಆರ್ಐಗಳನ್ನು ತಪಾಸಣೆ ಮಾಡಲು ಶೇ.100 ರಷ್ಟು ಸಮುದಾಯ ಆರೋಗ್ಯ ಕೇಂದ್ರ, ಶೇ.50 ರಷ್ಟು ಪ್ರಾಥಮಿಕ ಆರೋಗ್ಯ ಕೇಂದ್ರ/ನಗರ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಜ್ವರ ಚಿಕಿತ್ಸಾಲಯಗಳಾಗಿ ಪರಿವರ್ತಿಸುವುದು. ಇನ್ನುಳಿದ ಶೇ.50 ರಷ್ಟು ಪ್ರಾಥಮಿಕ ಆರೋಗ್ಯ ಕೇಂದ್ರ/ನಗರ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಕೋವಿಡ್‌ಯೇತರ ಅನಾರೋಗ್ಯ ಪರಿಸ್ಥಿತಿಯನ್ನು ತಪಾಸಣೆಗೆ ಬಳಕೆ ಮಾಡಿಕೊಳ್ಳುವುದು. 24*7 ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಕೋವಿಡ್‌ಯೇತರ ಆರೋಗ್ಯ ಸೇವೆಗಳನ್ನು ಮುಂದುವರೆಸುವುದು.

ಎಲ್ಲಾ ಆರೋಗ್ಯ ಸಂಸ್ಥೆಗಳಲ್ಲಿ ಕೋವಿಡ್ ಮತ್ತು ಕೋವಿಡ್‌ಯೇತರ ಸೇವೆಗಳಿಗೆ ಪ್ರತ್ಯೇಕ ಆಗಮನ ಮತ್ತು ನಿರ್ಗಮನ ದ್ವಾರದ ವ್ಯವಸ್ಥೆ ಮಾಡುವುದು.

ಜ್ವರ ಚಿಕಿತ್ಸಾಲಯಗಳು ಗಂಟಲು ಮಾದರಿ ದ್ರವ ಸಂಗ್ರಹಣಾ ಕೇಂದ್ರಗಳಾಗಿಯು ಕಾರ್ಯನಿರ್ವಹಿಸಬೇಕು. ಪ್ರಸ್ತುತ ಕಾರ್ಯನಿರತ ಪ್ರಯೋಗಾಲಯ ತಂತ್ರಜ್ಞರು ಮತ್ತು ಶುಶ್ರೂಷಕರ ಸೇವೆಯನ್ನು ಬಳಸಿಕೊಳ್ಳಬೇಕು. ಜ್ವರ ಚಿಕಿತ್ಸಾಲಯಗಳಲ್ಲಿ ಗಂಟಲು ಮಾದರಿ ಸಂಗ್ರಹಣೆಗೆ ವ್ಯವಸ್ಥಿತವಾದ (ಬೂತ್/ಕೊಠಡಿ) ವ್ಯವಸ್ಥೆಯನ್ನು ಮಾಡಿಕೊಳ್ಳಬೇಕು. ಬೂತ್ ಮಾದರಿ ಗಂಟಲು ದ್ರವ ಸಂಗ್ರಹಣಾ ಕೇಂದ್ರದ ಸ್ವರೂಪವನ್ನು ಅನುಬಂಧದಲ್ಲಿ ಅಡಕವಿರಿಸಲಾಗಿದೆ. ಜ್ವರ ಚಿಕಿತ್ಸಾಲಯಗಳಲ್ಲದ ಪ್ರಾಥಮಿಕ ಆರೋಗ್ಯ ಕೇಂದ್ರಗಳು ವ್ಯವಸ್ಥಿತ ಅನುಸರಣೆಗೆ ಅನುವಾಗಲು ಐಎಲ್ಐ ಮತ್ತು ಎಸ್ಎಆರ್ಐಗಳ ವಿವರಗಳನ್ನು ಜ್ವರ ಚಿಕಿತ್ಸಾಲಯದ ಜಾಲತಾಣದಲ್ಲಿ ಆರೋಹಣ ಮಾಡಬೇಕು. ಗಂಟಲು ದ್ರವದ ಮಾದರಿಗಳ ಸಂಗ್ರಹಣೆ ಮತ್ತು ಪ್ರಯೋಗಾಲಯಕ್ಕೆ ಸಾಗಾಣಿಕೆ ಮಾಡಲು ಪ್ರತ್ಯೇಕವಾದ ವಾಹನದ ವ್ಯವಸ್ಥೆಯನ್ನು ಜಿಲ್ಲಾಡಳಿತದಿಂದ ವ್ಯವಸ್ಥೆ ಮಾಡಬೇಕು. ಜಿಲ್ಲಾ ಮಟ್ಟದಲ್ಲಿ ಕಾರ್ಯನಿರ್ವಹಿಸುತ್ತಿರುವ ಇ-ಆಸ್ಪತ್ರೆ ಕಾರ್ಯಕ್ರಮದ ಪ್ರೋಗ್ರಾಮರ್ ಪ್ರತಿ ಜ್ವರ ಚಿಕಿತ್ಸಾಲಯಗಳಿಗೆ ಪ್ರತ್ಯೇಕವಾದ ಯೂಸರ್ ನೇಮ್ ಮತ್ತು ಪಾಸ್ ವರ್ಡ್‌ಗಳನ್ನು ಸೃಜನೆ ಮಾಡಬೇಕು, ಕಾಲಕಾಲಕ್ಕೆ ವರದಿಗಳು ಆರೋಹಣವಾಗುತ್ತಿರುವ ಬಗ್ಗೆ ಮೇಲ್ವಿಚಾರಣೆ ಮಾಡಬೇಕು. ಜ್ವರ ಚಿಕಿತ್ಸಾಲಯಗಳು ಆಪ್ತಮಿತ್ರದ ಮುಖೇನ ಶಿಫಾರಸುಗೊಂಡ ಪ್ರಕರಣಗಳು ಮತ್ತು ತಪ್ಪಿಹೋದ ಪ್ರಕರಣಗಳನ್ನು ಕೂಡ ವರದಿ ಮಾಡಬೇಕು ಹಾಗೂ ಜ್ವರ ಚಿಕಿತ್ಸಾಲಯಕ್ಕೆ ಭೇಟಿ ನೀಡಿ ಗಂಟಲು ದ್ರವದ ಮಾದರಿಯ ಸಂಗ್ರಹಣೆ ಮಾಡದ ಮತ್ತು ತಪಾಸಣೆ ಮಾಡದ ವ್ಯಕ್ತಿಗಳನ್ನು ಕೂಡ ಅನುಸರಣೆ ಮಾಡಬೇಕು.

22.6.

ಆಯುಕ್ತರು

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು

**ಪ್ರತಿ : ಮುಂದಿನ ಕ್ರಮಕ್ಕಾಗಿ**

1. ಜಿಲ್ಲಾ ಆ.ಕು.ಕ ಅಧಿಕಾರಿಗಳು
2. ಮುಖ್ಯ ಆರೋಗ್ಯ ಅಧಿಕಾರಿಗಳು, ಬಿ.ಬಿ.ಎಂಪಿ
3. ಜಿಲ್ಲಾ ಸರ್ವೇಕ್ಷಣಾ ಅಧಿಕಾರಿಗಳು

**ಪ್ರತಿ : ಮಾಹಿತಿಗಾಗಿ**

1. ಅಪರ ಮುಖ್ಯ ಕಾರ್ಯದರ್ಶಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಬೆಂಗಳೂರು.
2. ಆಯುಕ್ತರು, ಬಿಬಿಎಂಪಿ
3. ವಿಶೇಷ ಆಯುಕ್ತರು, ಬಿಬಿಎಂಪಿ
4. ಅಭಿಯಾನ ನಿರ್ದೇಶಕರು, ರಾಷ್ಟ್ರೀಯ ಆರೋಗ್ಯ ಅಭಿಯಾನ

5. ನಿರ್ದೇಶಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು
6. ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇಲಾಖೆ
7. ವಿಶೇಷ ಕರ್ತವ್ಯಾಧಿಕಾರಿಗಳು, ಕೋವಿಡ್-19
8. ಯೋಜನಾ ನಿರ್ದೇಶಕರು (ಆರ್ ಸಿಹೆಚ್)
9. ಯೋಜನಾ ನಿರ್ದೇಶಕರು (ಐಡಿಎಸ್‌ಪಿ)
10. ಜಂಟಿ ನಿರ್ದೇಶಕರು ಸಿಎಚ್‌ಡಿ
11. ಉಪ ನಿರ್ದೇಶಕರು, ಇ-ಆರೋಗ್ಯ